# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

## ಸಿ.ಸಿ.325/2021

ಸಾಕ್ಷಿದಾರರ ಹೇಳಿಕೆಃ

| | | |
|---|---|---|
| **ಹೆಸರು** | : | ಮಾದೇಶ ಅಲಿಯಾಸ್ ಕೆ ಎಂ ಮಹದೇವಪ್ಪ    ಚಾಸಾಃ **5**    ಪ್ರಾಸಾಃ **4** |
| **ತಂದೆಯ ಹೆಸರು** | : | ಹನುಮಂತಪ್ಪ |
| **ವಯಸ್ಸು** | : | **48** ವರ್ಷ |
| **ವೃತ್ತಿ** | : | ವ್ಯವಸಾಯ |
| **ವಾಸಸ್ಥಳ** | : | ಮಲೇಕುಂಬಳೂರು |

ದಿನಾಂಕಃ **06-03-2026** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ :-ಮಾನ್ಯ ಸ.ಸ.ಅ. ರವರಿಂದ:-

ಆರೋಪಿ ಗೊತ್ತು. ಚಾಸಾ-1 ರಿಂದ 4, 6 ಮತ್ತು 7 ಗೊತ್ತು. ಈಗ್ಗೆ 5 ವರ್ಷಗಳ ಹಿಂದೆ ಚಾಸಾ-1 ಮತ್ತು 4 ರವರಿಗೆ ಅಪಘಾತ ಹೇಗೆ ಮತ್ತು ಯಾರ ತಪ್ಪಿನಿಂದ ಆಯಿತು ಎಂಬ ವಿಚಾರ ನನಗೆ ಗೊತ್ತಿಲ್ಲ. ಈ ಬಗ್ಗೆ ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.

ಪಾಟೀ ಸವಾಲು :- ಮಾನ್ಯ ಸ.ಸ.ಅ. ರವರಿಂದ:-

ದಿಃ 29-12-2020 ರಂದು ಮದ್ಯಾಹ್ನ 02-30 ಗಂಟೆ ಸಮಯದಲ್ಲಿ ನಾನು ಕುಂದೂರು ಬಸವಪಟ್ಟಣ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಕುಂದೂರು ಕಡೆಯಿಂದ ಚಾಸಾ-1 ಮತ್ತು 4 ರವರು ಕೆಎ-17/ಹೆಚ್ ಬಿ-9641 ಮೋಟಾರ್ ಸೈಕಲ್ ನಲ್ಲಿ ಹೋಗುತ್ತಿದ್ದು ಮತ್ತು ಅವರ

ಹಿಂಬದಿಯಲ್ಲಿ ಆರೋಪಿಯು ಕೆಎ-17/ಡಿ-6320 ಗೂಡ್ಸ್ ಆಟೋವನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ಬೈಕ್ ಗೆ ಡಿಕ್ಕಿ ಪಡಿಸಿದ ಪರಿಣಾಮ ಬೈಕನ್ ನ ಹಿಂಬದಿಯಲ್ಲಿದ್ದ ಚಾಸಾ-1 ರವರಿಗೆ ಮಂಡಿಯ ಹತ್ತಿರ ತೀವ್ರ ಸ್ವರೂಪದ ಮತ್ತು ಚಾಸಾ-4 ರವರಿಗೆ ಸಣ್ಣಪುಟ್ಟ ಗಾಯಗಳಾಗಿರುತ್ತವೆ ಎಂದು ಮತ್ತು ನಾನು ಮತ್ತು ಚಾಸಾ-6 ರವರು ಅವರನ್ನು ಉಪಚರಿಸಿರುತ್ತೇವೆ ಎಂದು ಮತ್ತು ನಾನು ಮತ್ತು ಚಾಸಾ-4 ರವರು ಚಾಸಾ-1 ರವರನ್ನು ಕುಂದೂರು ಖಾಸಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ನಂತರ ದಾವಣಗೆರೆ ಸುಚೇತನ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಕಳುಹಿಸಿಕೊಟ್ಟಿರುತ್ತೇನೆ ಎಂದು ಮತ್ತು ಚಾಸಾ-4 ರವರಿಗೆ ಸಣ್ಣ ಪುಟ್ಟ ಗಾಯಗಳಾಗಿದ್ದರಿಂದ ಚಿಕಿತ್ಸೆ ಪಡೆದುಕೊಂಡಿರುವುದಿಲ್ಲ ಎಂದು ಆರೋಪಿಯ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದು ಮತ್ತು ಆರೋಪಿಯನ್ನು ಪುನಃ ನೋಡಿದರೆ ಗುರುತಿಸುತ್ತೇನೆ ಎಂದು ಪೊಲೀಸರಿಗೆ ನಿಪಿ-15 ರಂತೆ ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು :- ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.